QUESTION No. 239 (344)

MR. SPEAKER.—The Hon. Minister for Housing and Urban Development has written a letter to me stating that he is not feeling well. We shall take up this question, day after tomorrow.

Shortage of Firewood in Hunsur Taluk.

554. SRI H. L. TIMMEGOWDA (Basavanagudi).—Will the Minister for Forest, Mines and Geology be pleased to state:—

(*a*) whether there is any shortage of firewood in Hunsur taluk and the taluks adjoining it ;

(*b*) whether the Government is aware that in these taluks varginia tobacco growers need firewood to cure the foreign exchange earning tobacco ;

(*c*) the measure taken by the Government to supply adequate quantity of firewood to the tobacco growers to cure the tobacco and to the people for domestic use ;

(*d*) the measures taken by the Government to grow fast growing timber which can be suitable for firewood, in all the minor forests and in the regular forests of the State ?

SRI G. MADEGOWDA (Minister for Forest Mines and Geology).—

(*a*) Yes.

(*b*) Yes.

(*c*) The firewood available in coupes of Hunsur division in just enough to cater to the domestic needs of the local people. Therefore all the requirement of tobacco growers cannot be met from Forest Department and they have to make their own arrangements. However a quantity of 20,000 CMTS of firewood has been earmarked from Coondapur division in favour of tobacco growers of Hunsur division during 1981-82.

(*d*) Annually, 200 to 300 hectares of Fast growing timber is being raised in the Forest plantation in Hunsur division. All these material are meant for the future supplies to the public as well as to the industries and tobacco growers.

ಶ್ರೀ ಹೆಚ್ ಎಲ್. ತಿಮ್ಮೇಗೌಡ.—ಮಂತ್ರಿಗಳು ಉತ್ತರದಲ್ಲಿ 'The firewood available in coupes of Hunsur division is just enough to cater to the domestic needs of the local people. Therefore, all the requirement of tobacco growers cannot be met from Forest Department and they have to make their own arrangements.' ಎಂದು ಹೇಳಿದ್ದಾರೆ. ಈಗ ಯಾವ ಯಾವ ತಾಲ್ಲೂಕಿನಲ್ಲಿ ವರ್ಜೀನಿಯ ಹೊಗೆಸೊಪ್ಪನ್ನು ಬೆಳೆಯುತ್ತಾರೆ ಅಲ್ಲಿ ಸ್ವಂತವಾಗಿ ಯಾರಮರಗಳೂ ಇಲ್ಲ. ಸೌದೆ ಸಿಕ್ಕಬೇಕಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಸಿಕ್ಕಬೇಕು. ಮರಗಳನ್ನು ರಕ್ಷಣೆ ಮಾಡಬೇಕು ಎಂಬ ಕಾನೂನು ಇರುವುದರಿಂದ ಸ್ವಂತ ಜಮೀನಿನಲ್ಲಿ ಮರ ಇದ್ದರೂ ಕೂಡ ಪರ್ಮಿಷನ್ ಇಲ್ಲದೆ ಕಡಿಯುವಹಾಗಿರಲಿಲ್ಲ. ಈ ವರ್ಷಕ್ಕೆ ೨೦ ಸಾವಿರ ಸಿ.ಎಂ.ಟಿ.ಎಸ್. ಪ್ರಮಾಣದ ಕಟ್ಟಿಗೆಯನ್ನು

ಕುಂದಾಪುರ ಡಿವಿಜನ್‌ನಿಂದ ತರಿಸಿಕೊಡುತ್ತೇನೆ ಎಂದು ಹೇಳಿದ್ದೀರಿ. ಇದು ಸಾಕಾಗುವುದಿಲ್ಲ. ಈ ಐದಾರು ತಾಲ್ಲೂಕುಗಳಲ್ಲಿ ವರ್ಜೀನಿಯ ಟೊಬ್ಯಾಕೊ ಬೆಳೆಯತಕ್ಕಂಥಾದ್ದು ಬಹಳ ಶ್ರೇಷ್ಠವಾದುದು, ನೂರಕ್ಕೆ ೮೦ ಭಾಗ ಎಕ್ಸ್‌ಪೋರ್ಟ್ ಆಗುತ್ತಾ ಇದೆ. ಯಾವ ಕಾಡಿನಿಂದಲಾದರೂ ಇನ್ನೂ ಹೆಚ್ಚಿಗೆ ಸೌದೆಯನ್ನು ತರಿಸಿಕೊಡುವ ವ್ಯವಸ್ಥೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕು ಎಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜೆ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆಯ ತೀವ್ರತೆಯನ್ನು ಅರ್ಥಮಾಡಿ ಕೊಂಡು ಈಗ ೨೦ ಸಾವಿರ ಟನ್ ಕಟ್ಟಿಗೆಯನ್ನು ಟೊಬ್ಯಾಕೊ ಗ್ರೋಯರ್ಸ್‌ಗೆ ರಿಸರ್ವ್ ಮಾಡಿದ್ದೇವೆ. ನಮ್ಮಲ್ಲಿ ಸೌದೆ ಅಭಾವ ಜಾಸ್ತಿಯಾಗಿದೆ ಎನ್ನುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ. ಇನ್ನೂ ಸ್ವಲ್ಪ ಜಾಸ್ತಿ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—(ಈ) ಪ್ರಶ್ನೆಗೆ ಉತ್ತರವಾಗಿ ಹುಣಸೂರು ವಿಭಾಗದ ಅರಣ್ಯದಲ್ಲಿ ವಾರ್ಷಿಕವಾಗಿ ೨೦೦ ರಿಂದ ೩೦೦ ಹೆಕ್ಟೇರುಗಳಷ್ಟು ಪ್ರದೇಶಗಳಲ್ಲಿ ತ್ವರಿತವಾಗಿ ಬೆಳೆಯುವ ಮರಗಳನ್ನು ಬೆಳೆಸಲಾಗುತ್ತಿದೆ ಎಂದು ಹೇಳಿದ್ದೀರಿ. Fast growing ಅಂದರೆ ಎಷ್ಟು ದಿವಸಗಳಲ್ಲಿ ಮರ ಕಡಿಯುವುದಕ್ಕೆ ಸಿದ್ಧವಾಗುತ್ತದೆ ಎನ್ನುವುದನ್ನು ಸ್ವಲ್ಪ ಹೇಳಬೇಕು.

ಶ್ರೀ ಜೆ. ಮಾದೇಗೌಡ.—ಮಾನ್ಯ ಅಧ್ಯಕ್ಷರೆ, ಈ ಪ್ರಯತ್ನವನ್ನು ನಾವು ಎರಡು, ಮೂರು ವರ್ಷಗಳಿಂದ ಮಾಡುತ್ತಾ ಇದ್ದೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ. ಫಾಸ್ಟ್ ಗ್ರೋಯಿಂಗ್ ಮರ ಹಾಕಿದರೂ ೮-೯ ವರ್ಷಗಳಿಗೆ ಮುಂಚಿತವಾಗಿ ಕಡಿಯುವುದಕ್ಕೆ ಬರುವುದಿಲ್ಲ. ಇನ್ನು ೪ ವರ್ಷಗಳಲ್ಲಿ ಟೊಬ್ಯಾಕೊ ಗ್ರೋಯರ್ಸ್‌ಗೆ ಇಂಡಸ್ಟ್ರೀಸ್‌ಗೆ ಕೊಡುವುದಕ್ಕೆ ಸಿಗುತ್ತದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇನ್ನು ನಾಲ್ಕೈದು ವರ್ಷಗಳಲ್ಲಿ ಮರ ಕಡಿಯುವುದಕ್ಕೆ ಸಿದ್ಧವಾಗುತ್ತದೆಯೇ ?

ಶ್ರೀ ಜೆ. ಮಾದೇಗೌಡ.—ಮೂರು, ನಾಲ್ಕು ವರ್ಷಗಳಿಂದ ನಾವು ೨೦೦, ೩೦೦ ಹೆಕ್ಟೇರುಗಳಲ್ಲಿ ಮಾಡಿಕೊಂಡು ಬರುತ್ತಾ ಇದ್ದೇವೆ. ಇನ್ನೂ ನಾಲ್ಕೈದು ಉದ್ಯಮಗಳಿಗೆ ಸೌದೆ ಸಿಗತಕ್ಕ ಸಾಧ್ಯತೆ ಇದೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಇದು ಹುಣಸೂರು ತಾಲ್ಲೂಕು ಒಂದಕ್ಕೆ ಈ ಪ್ರಶ್ನೆ ಅಲ್ಲ, ಎಲ್ಲಾ ಕಡೆಯೂ ಇದೆ. ನಮ್ಮ ದೇಶದಲ್ಲಿ ಸಿಟಿಗಳಲ್ಲಿ ಬಿಟ್ಟು ಬೇರೆ ಕಡೆ ಕುಕ್ಕಿಂಗ್ ಸೌದೆ ಸಿಕ್ಕುವುದಿಲ್ಲ, ಕೋಲ್ ಸಿಕ್ಕುವುದಿಲ್ಲ. ಆದುದರಿಂದ ಹುಣಸೂರು ಡಿವಿಜನ್ ಒಂದರಲ್ಲೇ ಈ ರೀತಿ ಬೆಳೆಯುವುದನ್ನು ಪ್ರಾರಂಭ ಮಾಡಿರತಕ್ಕಂಥಾದ್ದು ಬಹಳ ಸಂತೋಷ. ಹುಣಸೂರು ತಾಲ್ಲೂಕಿನಲ್ಲಿ ದೊಡ್ಡ ದೊಡ್ಡ ಅರಣ್ಯ ಪ್ರದೇಶವಿದೆ. ಈ ಟೊಬ್ಯಾಕೊ ಗ್ರೋಯರ್ಸ್ ಟ್ರೀಸ್ ಹಾಕಿಲ್ಲ, ಅದನ್ನು ಹಾಕುವ ವ್ಯವಸ್ಥೆ ಮಾಡಬೇಕು. ತಿಪಟೂರು, ಹಾಸನ, ಕೋಲಾರ, ತುಮಕೂರು ಜಿಲ್ಲೆಗಳಲ್ಲಿ ವರ್ಜೀನಿಯ ಟೊಬ್ಯಾಕೊ ಬೆಳೆಯುತಕ್ಕ ರೈತರಿದ್ದಾರೆ.

ಈ ಟಿಂಬರ್‌ನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡಿ. ಹುಣಸೂರು ಮತ್ತು ಸುತ್ತಮುತ್ತಲಿನ ತಾಲ್ಲೂಕ್‌ಗಳಲ್ಲಿ ಎಲ್ಲೆಲ್ಲಿ ಖಾಲಿ ಜಾಗವಿದೆಯೋ ಅಲ್ಲಿ ಎಲ್ಲಾ ಫಾಸ್ಟ್ ಗ್ರೋಯಿಂಗ್ ಟ್ರೀಯನ್ನು ಬೆಳೆಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಮಾದೇಗೌಡ.—ಈಗಾಗಲೇ ಇದರ ಬಗ್ಗೆ ನಾವು ಪ್ರಯತ್ನ ಮಾಡುತ್ತಿದ್ದೇವೆ. ಈ ವರ್ಷ ಸುಮಾರು ೮ ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. ಸೋಷಿಯಲ್ ಫಾರೆಸ್ಟ್ರಿ ಸ್ಕೀಂನಿಂದ ಎಲ್ಲೆಲ್ಲಿ ಜಾಗ ವಿದೆಯೋ ಅದು ಗೋಮಾಳ ಲ್ಯಾಂಡ್ ಇರಬಹುದು, ಮತ್ತೆ ರಸ್ತೆ ಬಾಜಿನಲ್ಲಿ ಇಲ್ಲವೇ ಕಾಲುವೆ ಬಾಜಿ ನಲ್ಲಿ ಸಹ ಮರಗಳನ್ನು ಬೆಳೆಯುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಇದರಲ್ಲಿ ತಮ್ಮ ಸಹಕಾರವೂ ಕೂಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ. ಜಯದೇವರಾಜ್ ಅರಸ್.—ಫಾಸ್ಟ್ ಗ್ರೋಯಿಂಗ್ ಮರಗಳನ್ನು ಹಾಕುತ್ತಿದ್ದೇವೆಂದು ಮಾನ್ಯ ಮಂತ್ರಿಗಳವರು ಹೇಳಿದರು. ಮೈಸೂರು ಪೇಪರ್ ಮಿಲ್ಸ್, ಒಂದಕ್ಕೆ ಈಗ ಸರ್ಕಾರದವರು ಕೈಗೊಂಡಿರುವ ಫಾಸ್ಟ್ ಗ್ರೋಯಿಂಗ್ ಮರಗಳನ್ನು ಬೆಳೆಸುತ್ತಿರತಕ್ಕಂಥದ್ದು ಎಂದರೆ ಯೂಕಲಿಪ್ಟಸ್ ಮರಗಳನ್ನು. ಅದಕ್ಕೋಸ್ಕರ ಮಾನ್ಯ ಡಾ॥ ತಿಮ್ಮೇಗೌಡರು ಕೇಳಿದ ಹಾಗೆ ಈ ಫಾಸ್ಟ್ ಗ್ರೋಯಿಂಗ್.

ಮರವನ್ನು ಬೇರೆ ಎಲ್ಲೆಲ್ಲಿ ಯಾವ ಯಾವ ಉದ್ದೇಶಕ್ಕೂಸ್ಕರ ಬೆಳೆಸುತ್ತಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೇ ಇದು ಸೌದೆಗೆ ಸಂಬಂಧಪಟ್ಟ ಪ್ರಶ್ನೆಯಲ್ಲ. ಕೈಗಾರಿಕೆಗಳವರಿಗೆ ಉತ್ಪನ್ನ ಮಾಡಿಕೊಡುವುದಕ್ಕೆ ನಮ್ಮ ಹತ್ತಿರವಿಲ್ಲ. ಇವತ್ತು ಮೈಸೂರು ಪೇಪರ್ ಮಿಲ್ ಇರಬಹುದು, ವೆಸ್ಟ್ ಕೋಸ್ಟ್ ಪೇಪರ್ ಮಿಲ್ಸ್ ಆಥವಾ ಮತ್ತೊಂದು ಕೈಗಾರಿಕೆ ಇರಬಹುದು. ಅವರಿಗೆ ಸಪ್ಲೈ ಮಾಡುವುದಕ್ಕೆ ಅಗ್ರಿಮೆಂಟ್ ಪ್ರಕಾರವೇ ಸಾಧ್ಯವಿಲ್ಲ. ಅದಕ್ಕೂಸ್ಕರ ಅಂಥಾ ಕಾರ್ಖಾನೆಯವರೇ ಮುಂದೆ ಬಂದು ನಮ್ಮ ಹತ್ತಿರವಿರತಕ್ಕಂಥ ಜಮೀನಿನಲ್ಲಿ ಬೆಳೆದುಕೊಳ್ಳಬಹುದು ಎನ್ನತಕ್ಕ ರೀತಿಯಲ್ಲಿ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ.

ಅಧ್ಯಕ್ಷರು.—ಶ್ರೀ ಎಸ್. ಲಿಂಗಯ್ಯನವರ ಪ್ರಶ್ನೆ ೨೪೧೦ನ್ನು ತಡೆಹಿಡಿಯಲಾಗಿದೆ.

Construction of K.S.R.T.C. Bus Stand in Mandya.

166. SRI M. S. ATMANANDA (Mandya).—Will the Minister for Transport and Minor Irrigation be pleased to state:—

(*a*) when the Karnataka State Road Transport Corporation has taken possession of the site from Mandya Town Municipality to construct bus stand at Mandya Town ;

(*b*) the extent of land possessed and the amount given by Town Municipality for construction work ;

(*c*) the estimated cost of the bus stand ;

(*d*) the stage at which the construction work stands ?

SRI M. M. J. SADYOJATHA (Minister for Transport and Minor Irrigation).—

(*a*) On 8-5-1978.

(*b*) 13,794 square yards. Town Municipality has not given amount for construction work.

(*c*) Rs. 10,70,000.

(*d*) The work is being carried out at full swing and the roof work is going on.

ಶ್ರೀ ಎಂ. ಎಸ್. ಆತ್ಮಾನಂದ್.—ಸ್ವಾಮಿ ತಾವು ಉತ್ತರದಲ್ಲಿ ಭರದಿಂದ ಸಾಗುತ್ತಿದೆ ಎಂದು ಹೇಳಿದ್ದೀರಿ. ಈ ಒಂದು ಕಾರ್ಯವನ್ನು ಇನ್ನು ಎಷ್ಟು ದಿವಸದಲ್ಲಿ ಪೂರ್ಣಗಿಸಿಕೊಡುತ್ತೀರಿ. ಏತಕ್ಕೆಂದರೆ ಮಂಡ್ಯಾ ನಗರ ಜಿಲ್ಲಾ ಕೇಂದ್ರವಾಗಿದ್ದು ಈ ಒಂದು ಹೊಸ ನಿಲ್ದಾಣವಾದರೆ ಅಲ್ಲಿಗೆ ಸುಮಾರು ೨೫೦,೩೫೦ ಬಸ್ಸ್‌ಗಳು ಬಂದು ನಿಲ್ಲುವುದಕ್ಕೆ ಅನುಕೂಲವಾಗುತ್ತದೆ. ಅಲ್ಲಿಗೆ ಒಂದು ಬಸ್ ಡಿಪೋ ಅತ್ಯಂತ ಅವಶ್ಯಕವಾಗಿರುವುದರಿಂದ ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂದು ಕೇಳಬಯಸುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ.—ಈಗಾಗಲೇ ಅಲ್ಲಿ ಕೆಲಸ ಪ್ರಾರಂಭವಾಗಿದೆ. ಈಗಾಗಲೇ ರೂಫಿಂಗ್ ಹಾಕಿದ್ದಾರೆ. ೪-೧೧-೧೯೭೮ಕ್ಕೆ ಟೆಂಡರ್ ಕಂಡಿಷನ್ ಪ್ರಕಾರ ಮುಗಿಯುತ್ತದೆ.

ಶ್ರೀ ಎಂ. ಎಸ್. ಆತ್ಮಾನಂದ್.—ಹೊಸದಾಗಿ ಡಿಪೋವನ್ನು ಸ್ಥಾಪಿಸುವ ಬಗ್ಗೆ ನಾನು ಕೇಳಿಶ್ಚಿದ್ದೇನೆ.